# ಮಳೆಗಾಲದ ಅತಿಥಿ

■ ಚಿತ್ರ– ಲೇಖನ: **ಜಿ. ಎಸ್. ಹೆಗಡೆ**



ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಹೂವನ್ನು ಬೆಳೆಯಲಾಗುತ್ತಿದೆ. ಹೂವಿಗೆ ಮಹಾನಗರಗಳಲ್ಲಿ ಉತ್ತಮ ಧಾರಣೆಯೂ ಇರುವುದರಿಂದ ಅನೇಕರು ಹೂವಿನ ಕೃಷಿ ಮಾಡಿ ಯಶಸ್ವಿಯಾಗಿದ್ದಾರೆ. ಮತ್ತೆ ಕೆಲವರು ಮನೆ ಅಂಗಳದಲ್ಲಿ ನಾನಾ ಜಾತಿ, ವರ್ಣದ ಹೂಗಳನ್ನು ಬೆಳೆದು ಅಂಗಳದ ಸೊಬಗನ್ನು ಹೆಚ್ಚಿಸಿದ್ದಾರೆ.

ಮಳೆಗಾಲದ ದಿನಗಳಲ್ಲಿ ಮಲೆನಾಡಿನ ಕೃಷಿಕರ ಮನೆ ಅಂಗಳದಲ್ಲಿ ವೈವಿಧ್ಯಮಯವಾದ ಹೂಗಳು ಅರಳಿ ಸಂಭ್ರಮಿಸುತ್ತವೆ. ಡೇರೆ, ಜೀನಿಯಾ, ಸೋಣೆ, ನಾಗದಾಳಿ.. ಇತ್ಯಾದಿ. ಈ ಹೂಗಳನ್ನು 'ಮಳೆಗಾಲದ ಅತಿಥಿ' ಎನ್ನಬಹುದೇನೋ. ಮಳೆಗಾಲದಲ್ಲಿ ಸಾಕಷ್ಟು ನೀರು ಸುಲಭವಾಗಿ ಸಿಗುವುದರಿಂದ ಭೂಮಿಯೂ ಫಲವತ್ತತೆಯಿಂದ ಕೂಡಿರುತ್ತದೆ.

ವಿದೇಶಿಯರ ಕೊಡುಗೆ: ಡೇರೆ ವಿದೇಶಿ ಮೂಲದ ಹೂವು. ಮೆಕ್ಸಿಕೋ ದೇಶದಲ್ಲಿ ಕಂಡು ಬಂದ ಈ ಹೂವು ಡಾಲಿಯಾ ಮೇರಿಯಾ ಬಿಲಿಸ್ ಕಾಂಪೋಸಿಟ್ ಎಂಬ ವರ್ಗಕ್ಕೆ ಸೇರಿದ್ದು. ಯೂರೋಪ್ ದೇಶಗಳಲ್ಲಿ ಪ್ರಸಿದ್ಧಿಯಾಗಿರುವ ಡೇರೆ ಹೂ, ಮೆಕ್ಸಿಕೋದ ರಾಷ್ಟ್ರೀಯ ಪುಷ್ಪವೂ ಹೌದು.

ಮಲೆನಾಡಿನಲ್ಲಿ ಸುಲಭವಾಗಿ ಬೆಳೆಯುವ ಡೇರೆ ಹೂವು, ಕೃಷಿಕರ ಮನೆ ಅಂಗಳದ ಮಳೆಗಾಲದ ಕಾಯಂ ಅತಿಥಿ! ಒಂದು ಗಿಡದಲ್ಲಿ ಸುಮಾರು 4 ರಿಂದ 15 ಹೂಗಳು ಬಿಡುತ್ತವೆ. ಗಿಡದಲ್ಲಿಯೇ ಇದ್ದರೆ, ಹೂವು ಏಳೆಂಟು ದಿನಗಳ ಕಾಲ ತಾಜಾತನದಿಂದ ಕಂಗೊಳಿಸುತ್ತದೆ. ಮಲೆನಾಡಿನಲ್ಲಿ ಡೇರೆ ಹೂಗಳನ್ನು ಹೆಚ್ಚಾಗಿ ಪೂಜೆಗೆ ಬಳಸುತ್ತಾರೆ. ಗ್ರಾಮೀಣ ಪ್ರದೇಶದ ಕೆಲ ಹೆಂಗಳೆಯರ ಮುಡಿಗೇರುವುದಿದೆ. ಹಾಗೆ ನೋಡಿದರೆ, ಈ ಡೇರೆ ಹೂವನ್ನು ಮಲೆನಾಡಿನಲ್ಲಿ ಮನೆ ಅಂಗಳದಲ್ಲಿ ಶೋಕಿಗಾಗಿ ಬೆಳೆಸುವವರೇ ಹೆಚ್ಚು.

ಆಧುನಿಕ ಜೀವನ ಕ್ರಮದಲ್ಲಿ ಮೊದಲಿನಂತೆ ಹೆಣ್ಣುಮಕ್ಕಳಿಗೆ ಹೂ ಗಿಡಗಳನ್ನು ಬೆಳೆಸಲು ಸಮಯವಿಲ್ಲ, ಆಸಕ್ತಿಯೂ ಕಮ್ಮಿ. ಗ್ರಾಮೀಣ ಪ್ರದೇಶಗಳಲ್ಲಿಯೂ ಹೂಗಿಡಗಳನ್ನು ಬೆಳೆಸುವವರ ಸಂಖ್ಯೆ ಕಡಿಮೆಯಾಗಿದೆ!

